# ನೋರಾ ಮಾಡಿದ ಪುರುಷ ವಿಶ್ಲೇಷಣೆ

ನಟಿ ನೋರಾ ಫತೇಹಿ ತಮ್ಮ ಸ್ನಿಗ್ಧ ಸೌಂದರ್ಯ ಹಾಗೂ ನೃತ್ಯ ಲಾಲಿತ್ಯಕ್ಕೆ ಹೆಸರುವಾಸಿಯಾದವರು. ರಿಯಾಲಿಟಿ ಶೋ ತೀರ್ಪುಗಾರರಾಗಿ ಕೂಡ ಜನಮಾನಸದಲ್ಲಿ ಮನೆ ಮಾಡಿದ್ದಾರೆ. ಆದರೆ, ನಟನೆಯ ಮೂಲಕ ಛಾಪು ಮೂಡಿಸಿದ್ದು ಕಡಿಮೆ. ಸ್ಟೈಲ್ ಸ್ಟೇಟ್‌ಮೆಂಟ್ ಒಂದನ್ನೇ ಬಂಡವಾಳ ಮಾಡಿಕೊಂಡ ಅವರು ಭಾರತದ ಪುರುಷರ ಕುರಿತು ವಿದೇಶಿ ಹೆಣ್ಣುಮಕ್ಕಳು ಯಾವ ರೀತಿ ಮಾತಾಡುತ್ತಾರೆ ಎನ್ನುವುದನ್ನು ಇತ್ತೀಚೆಗೆ ಹೇಳಿದರು. ಅಮೆರಿಕದವರಿಗೆ ಒಂದು ರೀತಿ, ಯೂರೋಪ್‌ನ ಹೆಣ್ಣುಮಕ್ಕಳಿಗೆ ಭಾರತದ ಪುರುಷರ ಬಗ್ಗೆ ಇನ್ನೊಂದು ರೀತಿ ಭಾವನೆ ಇರುತ್ತದೆ. ಭಾರತದವರು ವಿದೇಶಿ ಜನರನ್ನು ಕಂಡ ತಕ್ಷಣ ಒಂದೊಂದು ರೀತಿ ಮಾತಾಡುವಂತೆ ಅಲ್ಲಿನವರೂ ಮಾತಾಡುತ್ತಾರೆ ಎಂದು ಅವರು ಹೇಳಿದರು.

ಮಧ್ಯಪ್ರಾಚ್ಯದ ಜನರು ಹಾಗೂ ಆಫ್ರಿಕನ್ನರು ಕಂಡರೆ ಬಹುತೇಕ ವಿದೇಶದವರು ಹೇಗೆ ಪ್ರತಿಕ್ರಿಯೆ ನೀಡುವರೋ ಭಾರತೀಯರನ್ನು ಕಂಡರೂ ಹಾಗೆಯೇ ಮಾತಾಡುತ್ತಾರೆ ಎಂದು ನೋರಾ ಸಂದರ್ಶನವೊಂದರಲ್ಲಿ ಅಭಿಪ್ರಾಯ ಹಂಚಿಕೊಂಡರು.

ಅರಬ್ ಹುಡುಗಿಯಾದ ನೋರಾ ಭಾರತದ ನಟ ಅಂಗದ್ ಬೇಡಿ ಅವರ ಜೊತೆ ಕೆಲವು ಕಾಲ ಪ್ರೇಮಸಂಬಂಧದಲ್ಲಿ ಇದ್ದರು. ಆ ಸಂಬಂಧ ಮುರಿದ ನಂತರವೂ ಅಂಗದ್ ಈ ನಟಿಯ ಕುರಿತು ಒಳ್ಳೆಯ ಮಾತನ್ನೇ ಆಡಿದ್ದರು. ನೋರಾ ಅಪರೂಪದ ಪ್ರತಿಭೆ. ಚಿತ್ರರಂಗದಲ್ಲಿ ಅವರು ಸಾಕಷ್ಟು ಬೆಳೆಯುತ್ತಾರೆ ಎಂದವರು ಭವಿಷ್ಯ ನುಡಿದಿದ್ದರು.



ಚಿತ್ರರಂಗದಲ್ಲಿ ಹುಡುಗರು ಹೇಗೆಲ್ಲ ವರ್ತಿಸುತ್ತಾರೆ ಎನ್ನುವುದಕ್ಕೆ ನೋರಾ ಒಂದು ಉದಾಹರಣೆ ಕೊಟ್ಟಿದ್ದರು. ಹುಡುಗನೊಬ್ಬ ಹುಡುಗಿಯ ಜೊತೆ ಚಾಟ್ ಮಾಡುತ್ತಾನೆ. ಆಮೇಲೆ ಖುದ್ದು ಮಾತಾಡಿಸುತ್ತಾನೆ. ಚಾಟ್ ಮುಂದುವರೆಸುತ್ತಾನೆ. ಇದ್ದಕ್ಕಿದ್ದಂತೆ ಮೌನವಾಗುತ್ತಾನೆ. ಕೆಲವು ದಿನಗಳ ನಂತರ ಮತ್ತೆ ಮಾತಾಡುತ್ತಾನೆ. ಆಮೇಲೆ ಮತ್ತದೇ ಮೌನ. ನಾವು ಮೌನದಿಂದ ಇದ್ದಾನೆ ಅಂದುಕೊಂಡಿದ್ದ ಸಂದರ್ಭದಲ್ಲಿ ಬೇರೆಯವರ ಜೊತೆ ಮಾತಾಡುತ್ತಾ ಇರುತ್ತಾನೆ ಎಂದು ಅವರು ತಮಾಷೆಯ ಶೈಲಿಯಲ್ಲಿ ಹೇಳಿದ್ದರು. ತಮಗೆ ವೈಯಕ್ತಿಕವಾಗಿ ಅಂತಹ ಅನುಭವ ಆಗಿಲ್ಲ ಎಂದು ಮಾತು ಸೇರಿಸಿದ್ದರು.

ನೋರಾ ನಟಿಸಿದ್ದ ‘ಮಡಗಾಸ್ಕರ್ ಎಕ್ಸ್‌ಪ್ರೆಸ್’ ಸಿನಿಮಾ ಬಿಡುಗಡೆಯಾಗಿ ಒಂದಿಷ್ಟು ಗಳಿಕೆ ಕಂಡಿತ್ತು. ಫರ್ಹಾನ್ ಅಖ್ತರ್ ಹಾಗೂ ರಿತೇಶ್ ನಿರ್ಮಾಣ ಸಂಸ್ಥೆಗಳ ನಿರ್ಮಾಣದ ‘ಡಿ ಕಾಮಿಡಿ’ ಎನ್ನುವ ಇನ್ನೊಂದು ಚಿತ್ರವೂ ತೆರೆಕಂಡಿತ್ತು. ‘ಬಿ ಹ್ಯಾಪಿ’ ಎಂಬ ಮಗದೊಂದು ಚಿತ್ರ ಬಿಡುಗಡೆ ಆಗಬೇಕಿದೆ. ■



## ಒಂದೇ ಚಿತ್ರದಲ್ಲಿ ಹೃತಿಕ್, ಜೂನಿಯರ್ ಎನ್‌ಟಿಆರ್

ಜೂನಿಯರ್ ಎನ್‌ಟಿಆರ್ ಬಗ್ಗೆ ಮೊನ್ನೆ ಮೊನ್ನೆ ಮುಂಬೈನಲ್ಲಿ ಜೋರು ಮಾತು. ಅವರು ‘ವಾರ್ 2’ ಚಿತ್ರದಲ್ಲಿ ನಟಿಸಲು ಬಂದದ್ದೇ ಚಿತ್ರಪ್ರೇಮಿಗಳಿಗೆ ಖುಷಿಯೋ ಖುಷಿ. ‘ಆರ್‌ಆರ್‌ಆರ್’ ಸಿನಿಮಾ ಬಂದ ನಂತರ ಅವರೂ ಇಡೀ ದೇಶದ ಜನಪ್ರಿಯ ನಟರ ಸಾಲಿಗೆ ಸೇರಿದರು.

‘ವಾರ್ 2’ ಹಿಂದಿ ಚಿತ್ರದಲ್ಲಿ ಅವರು ಹಾಗೂ ಹೃತಿಕ್ ರೋಶನ್ ತೆರೆ ಹಂಚಿಕೊಳ್ಳಲಿದ್ದಾರೆ. ಯಶ್ ರಾಜ್ ಯೂನಿವರ್ಸ್‌ಗೆ ಸೇರಿದ ಈ ಚಿತ್ರವನ್ನು ಅಯಾನ್ ಮುಖರ್ಜಿ ನಿರ್ದೇಶಿಸುತ್ತಿದ್ದು, ಕಿಯಾರಾ ಅಡ್ವಾಣಿ ನಾಯಕಿಯಾಗಿ ನಿಕ್ಕಿಯಾಗಿದ್ದಾರೆ. ಇವರು ಯಾರಿಗೆ ಜೋಡಿ ಎನ್ನುವುದು ಮಾತ್ರ ಇನ್ನೂ ಗುಟ್ಟಾಗಿ ಉಳಿದಿದೆ. ಜೂನಿಯರ್ ಎನ್‌ಟಿಆರ್ ಹತ್ತು ದಿನಗಳ ಕಾಲ್‌ಶೀಟ್ ನೀಡಿದ್ದರು. ಅದರಲ್ಲಿ ಬಹುತೇಕ ಸಾಹಸಪ್ರಧಾನ ದೃಶ್ಯಗಳ ಚಿತ್ರೀಕರಣಕ್ಕೆ ಸಿದ್ಧತೆ ನಡೆದಿತ್ತು. ಮತ್ತೊಂದು ಹಂತದ ಚಿತ್ರೀಕರಣದಲ್ಲಿ ಅವರು ಭಾಗಿಯಾಗುವರೇ ಎಂದು ಕಾದು ನೋಡಬೇಕಿದೆ.

ಹೃತಿಕ್ ಹಾಗೂ ಟೈಗರ್ ಶ್ರಾಫ್ ಅಭಿನಯದ ‘ವಾರ್’ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಮಟ್ಟದಲ್ಲಿ ಯಶಸ್ವಿ ಆಗಿತ್ತು. ಅದರ ಮುಂದುವರಿದ ಭಾಗದಲ್ಲಿ ಹೃತಿಕ್ ಜೊತೆಗೆ ಜೂನಿಯರ್ ಎನ್‌ಟಿಆರ್ ಇರುವುದು ಕುತೂಹಲವನ್ನು ಹೆಚ್ಚಿಸಿದೆ. ಇಬ್ಬರೂ ಒಟ್ಟಾಗಿ ನೃತ್ಯ ಮಾಡುವುದು ಕೂಡ ಅಭಿಮಾನಿಗಳಿಗೆ ಹಬ್ಬ ಆಗಲಿದೆ. ಸಾಹಸ ದೃಶ್ಯಗಳಲ್ಲಿ ದಕ್ಷಿಣದ ನಟನ ಚಲನಶೀಲತೆ ಹಾಗೂ ಭಾವುಕ ಅಭಿನಯದಲ್ಲಿ ಅವರ ತನ್ಮಯತೆ ಮೆಚ್ಚಿದವರೇ ಹೆಚ್ಚು. ಜಗಪತಿ ಬಾಬು ಕೂಡ ಈ ಸಿನಿಮಾದ ಮುಖ್ಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ■

